## ಕಲ್ಪನೆ ಕಾವ್ಯ




# ಚರಾಚರವು ಚೆಲುವು.....

ಸುಂದರಿಯು ಸುಂದರವ
ಸೆರೆಹಿಡಿವ ಕೌತುಕದಿ
ಮೊಗದೊಳಗೆ ಮೂಡಿಹುದು ಮಂದಹಾಸ....
ವರ್ಣನೆಗೂ ನಿಲುಕದಾ
ಚೆಲುವು ತನಗಿದ್ದರೂ
ಹೊರಗೆಲ್ಲೋ ಅದನುಡುಕೋ ದೂರ ದೃಷ್ಟಿ....

ಮೈ ಮೇಲೆ ಚಿತ್ತಾರ
ಮೂಡಿಹವು ತರತರದಿ
ಇವಳ ಚೆಲುವಿಗೆ ನೀಡಿ ಇನ್ನೂ ರಂಗು...
ಕವಿತೆ ಬರೆಯಲು ಹೋದ್ರೆ
ಸಾಲು ಸಾಲುಗಳೆಲ್ಲ
ಇವಳಂದ ವರ್ಣಿಸು ಅಂತೆನ್ನ ಗುಂಗು....

ಕಾಣುವ ಕಂಗಳಿಗೆ
ಚರಾಚರವು ಚೆಲುವು....
ದೃಷ್ಟಿಯ ತೆರೆದಂತೆ ಸೃಷ್ಟಿತಾನು....
ಚಿತ್ತಚಂಚಲವಿರದ
ದುರ್ಗುಣವು ತುಂಬಿರದ
ತನುವು ಮನವು ಎಂದೂ ಚೆಲುವ ಬಾನ

**-ಶೇಖರಯ್ಯ ಟಿ.ಎಚ್.ಎಂ.,ಗೆದ್ದಲಗಟ್ಟೆ**

# ಪ್ರೀತಿ ಮಸೂರದಲಿ

ನೀನು ದೂರದ ದೃಶ್ಯಕ್ಕೆ ಮಾರು ಹೋದೆ
ನಾನು ಎವೆಯಿಕ್ಕದೆ ನಿನ್ನ ನೋಡಿದೆ
ನಿನ್ನ ಸಂತಸದ ಮುಖಾರವಿಂದದಲ್ಲಿ
ಏನೆಲ್ಲ ಕಸರತ್ತು ನಡೆದಿದೆ
ಆ ನಿಸರ್ಗ ಸೌಂದರ್ಯ
ಕಾಣುತಿಹನೆ ಸೂರ್ಯ
ಮರ ಗಿಡ ಬೆಟ್ಟ ಗುಡ್ಡ ನದಿ ನೀರು
ಅವೇ ನಮ್ಮ ಉಸಿರು
ಪ್ರಕೃತಿ ಮಡಿಲಲ್ಲಿ ಸಾಗಲಿ ತೇರು

ನಿನ್ನ ಪ್ರೀತಿ ಮಸೂರದಲಿ
ನಾನು ಸೆರೆಯಾಗಿ
ದಿನ ರಾತ್ರಿ ಕನಸ ನಯನದಲಿ
ಕಾಡುವೆ
ಹಾಡುವೆ
ನೋಡುವೆ
ಜೊತೆಯಾಗುವೆ
ಒಮ್ಮೊಮ್ಮೆ ನನ್ನ ಕಡೆ ನೋಡಿ
ಪ್ರೀತಿ ಮಸೂರದಲಿ...

**-ಎಸ್.ಆರ್. ನರಸಿಂಹ ಪ್ರಸಾದ್**
**ಕುಣಿಗಲ್**